ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹೆಣ್ಣುಮಕ್ಕಳಿಗೆ ದೇವರು ರೆಕ್ಕೆ ಕೊಟ್ಟಿದ್ದರೆ?*



ಹಾರುವ ಹೆಣ್ಣುಗಳನ್ನು ವೀಕ್ಷಿಸಲು ಗಂಡುಮಕ್ಕಳು ಬ್ಯುಲ್ಟ್ ಇನ್ ಬೈನಾಕ್ಯುಲರ್ ಬೇಡುತ್ತಿದ್ದರು.

ಟಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ತನ್ನಲ್ಲಿರುವ ಪದಾರ್ಥಕ್ಕೆ ಬೆಲೆ ಕಟ್ಟಲಾರದವ ಯಾರು?*
ಮನುಷ್ಯನೇ. ಕೆಡುವವರೆಗೆ ಕಣ್ಣು, ಕಿವಿ, ಕಿಡ್ನಿ, ಯಾವುದರ ಬೆಲೆಯೂ ಅರಿಯದ ಮಹಾನ್ ದಡ್ಡ ಮನುಜ.

ಅಮರಯ್ಯಾ ಪತ್ರಿಮಠ, ಶೋರಾಪೂರ
*ಕಣ್ಣಿದ್ದೂ ಕುರುಡರು ಯಾರು?*
ಕಾಸಿನಾಸೆಗೆ ಕೆಡುಕನೆಂದು ತಿಳಿದೂ ಮತ ಹಾಕುವ ಮತದಾರರು.

ಆರ್. ಮಧುಸೂದನ್, ಹಾಸನ
*ನ್ಯಾಯವಾದಿಗಳ ಕೋಟು ಕಪ್ಪು ಯಾಕೆ?*
ಎಲ್ಲ ವರ್ಣದ ದೋಷಗಳನ್ನೂ ಸಂಪೂರ್ಣವಾಗಿ ಹೀರಿಕೊಳ್ಳಲಿ ಎಂದು!

ಪಿ.ಜೆ. ರಾಘವೇಂದ್ರ, ಮೈಸೂರು
*ಹಾಸನದ ಫ್ಯಾಶನ್ ಡಿಸೈನರೊಬ್ಬರು ಕಣ್ಣಿನಲ್ಲಿಯೇ ಅಳತೆ ತೆಗೆದುಕೊಳ್ಳುತ್ತಾರಂತೆ?*



ಅನುಭವ ಹಾಗಿದೆ. ಇಪ್ಪತ್ತು ವರ್ಷಗಳಿಂದ ಹುಡುಗಿಯರನ್ನು ನೋಡಿದ್ದೂ ನೋಡಿದ್ದೇ.

ಎಂ. ಮೃತ್ಯುಂಜಯ, ಚಿತ್ರದುರ್ಗ
*'ಎಣ್ಣೆಗೆಂಪು ದುಂಡುಮುಖ' ಚಲನಚಿತ್ರ ಯಾವಾಗ ಬರುತ್ತದೆ?*
ಈಗತಾನೇ ಬೀರ್ ಹೀರಲು ಆರಂಭಿಸಿದ್ದಾರಂತೆ. ಕೆಲವೇ ತಿಂಗಳಲ್ಲಿ ಮುಖ ಕೆಂಪಾಗಿ, ದುಂಡಾದ ತಕ್ಷಣ ಚಿತ್ರೀಕರಣ ಶುರು.

ರತ್ನಾ ಅಶೋಕ ಗೊರವರ, ಧಾರವಾಡ
*ಹುಟ್ಟಿಗೆ ಒಂಬತ್ತು ತಿಂಗಳು ಕಾಯುವಂತೆ ಸಾವಿನ ದಿನವೂ ತಿಳಿದಿದ್ದರೆ?*
ತಾವೇ ಮಸಣಕ್ಕೆ ನಡೆದುಹೋಗಿ ವ್ಯಾನ್ ಖರ್ಚು ಉಳಿಸಬಹುದಿತ್ತು.

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಕೆಟ್ಟದ್ದನ್ನು ಕೇಳಬಾರದು, ನೋಡಬಾರದು, ಆಡಬಾರದು ಎಂದರು ಗಾಂಧೀಜಿ. ಇಂದು ರಾಜಕಾರಣಿಗಳು ಬರೀ ಕೆಟ್ಟದ್ದೇ ಮಾಡುವವರಲ್ಲಾ?*
'ಮಾಡಬಾರದು ಎಂದಿಲ್ಲವಲ್ಲ' ಎಂದನಾ ಖೂಳ.

ನಾಗವೇಣಿ ಸೋಮಶೇಖರ್, ಮೈಸೂರು
*ಪತಿಯನ್ನು 'ಗಂಡ' ಎಂದು ಕರೆಯುವುದು ಯಾಕೆ?*
'ಗಂಡು' ಕೊಂಬು ಕಳೆದುಕೊಂಡರೆ ಆಗುವುದೇ ಗಂಡ!

ಅಭಿಷೇಕ್ ರೆಡ್ಡಿ, ಗೌರಿಬಿದನೂರು
*ಜೀವಕ್ಕೆ, ಕಾರಿಗೆ, ಬೈಕಿಗೆ ವಿಮೆ ಇರುವಂತೆ ಸಮಯಕ್ಕೂ ವಿಮೆ ಇದ್ದರೆ ಚೆನ್ನಾಗಿರುತ್ತದಲ್ಲವೆ?*
ನಿಜ. ಆದರೆ ಇದು ಕ್ಷಣಕ್ಷಣಕ್ಕೂ ಮುಂದೆ ಹೋಗುತ್ತಿರುವುದರಿಂದ ರೆಸಿಡೆನ್ಸ್ ಪ್ರೂಫ್ ಕೊಡಲಾಗದೆ ವಿಮೆ ಮಾಡಲಾಗಿಲ್ಲ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಓಬಿರಾಯನ ಕಾಲಕ್ಕೂ, ಇಂದಿನ ಕಾಲಕ್ಕೂ ಇರುವ ವ್ಯತ್ಯಾಸವೇನು ಶಿವಾ?*
ಒಂದೇ ಅಕ್ಷರ ವ್ಯತ್ಯಾಸ; ಅಂದು ಸಮರಸವೇ ಜೀವನ; ಇಂದು ಸಮರವೇ ಜೀವನ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ತಾಯಿಗೆ ಗುಡಿಯಿರದ ದೇವಿ ಎಂದೇಕೆ ಹೇಳುವರು?*
ಕಡೆಗಾಲದಲ್ಲಿ ಯಾವ ಮಕ್ಕಳೂ ಸಾಕಲು ಬಯಸದೆ ಮನೆಯಿಂದ ಮನೆಗೆ/ವೃದ್ಧಾಶ್ರಮಕ್ಕೆ ವರ್ಗಾಯಿಸುವುದರಿಂದ.

ವಿ. ಹೇಮಂತಕುಮಾರ್, ಬೆಂಗಳೂರು
*ಮದುವೆ ಆಗುತ್ತಿದ್ದಂತೆ ಹುಡುಗಿಯರು ದಪ್ಪ ಆಗುತ್ತಾರೆ. ಏಕೆ?*
ತಮ್ಮೆಲ್ಲ ಕೆಲಸಗಳನ್ನು ಗೊಣಗದೆ, ಸಂಬಳ ಕೇಳದೆ, ನಿಷ್ಠೆಯಿಂದ ಮಾಡುವ ಆಳು ದೊರೆತ ಸಂತೋಷಕ್ಕೆ.

## ಬಹುಮಾನಿತ ಪ್ರಶ್ನೆ

ಮಂಜುಳಾ ವೆಂಕಟೇಶಯ್ಯ, ಗದಗ
*ಈ ಬಾರಿಯ ಆಯುಧಪೂಜೆಗೆ ಮಹಿಳೆಯರಿಂದ ಹೆಚ್ಚು ಪೂಜಿಸಲ್ಪಟ್ಟ ಆಯುಧ ಯಾವುದು ಸಾರ್?*
ಟಿವಿ ರಿಮೋಟ್!

ವಿ. ಹಮೀದ್, ವಿಟ್ಲ
*ಈಚೆಗೆ ಭಯಾನಕ ಸಿನಿಮಾಗಳು ಹೆಚ್ಚಾಗಿ ನಿರ್ಮಾಣಗೊಳ್ಳುತ್ತಿವೆಯಲ್ಲಾ, ಕಾರಣವೇನು?*
ಪೋಸ್ಟರ್ ನೋಡಿ ತಪ್ಪು ತಿಳಿದಿದ್ದೀರಿ. ಅವು ದೆವ್ವಗಳಲ್ಲ, ಕೆಲವು ಹೀರೋಗಳೇ ಹಾಗಿದ್ದಾರಷ್ಟೆ.

ಸುಂದರ್, ಬೆಂಗಳೂರು
*ಕಣ್ಣೀರಿನಿಂದ ವಿದ್ಯುತ್ ಉತ್ಪಾದನೆ ಸಾಧ್ಯವೆ?*
ವಿದ್ವತ್ ಉತ್ಪಾದನೆಯಂತೂ ಸಾಧ್ಯ ಕ್ರೌಂಚದ ಗೋಳಾಟದಿಂದಲೇ ರಾಮಾಯಣ ಉದಯಿಸಿದ್ದು!

ನವಿರವಿ, ಬಾಳೆಹೊನ್ನೂರು
*ನೀರು ಹರಿಯುವ ಚಾನಲ್‌ಗಳಿಗೂ, ಟಿವಿ ಚಾನಲ್‌ಗಳಿಗೂ ಇರುವ ವ್ಯತ್ಯಾಸವೇನು?*



ಒಂದರಲ್ಲಿ ಕಾವೇರಿ ಓಡುವುದನ್ನು ನೋಡಬಹುದು; ಇನ್ನೊಂದರಲ್ಲಿ ತತ್ಕಾರಣ ಕಾವು ಏರಿ ಓಡುವುದನ್ನು ನೋಡಬಹುದು.

ಜಾಕೋಬ್ ಡಿಸೋಜ, ಕುರುವಳ್ಳಿ
*ಬದುಕು ಸುಂದರವಾಗುವುದು ಯಾವಾಗ?*
ಹೊಂದಾಣಿಕೆ ಎಂಬ ಮೇಕಪ್ ಧರಿಸಿದಾಗ.

ಹಾಡ್ಯ ಬ. ಜಯಾನಂದ, ಮೈಸೂರು
*ಲೈಫ್‌ಗೂ, ಫೈಲ್‌ಗೂ ಏನು ವ್ಯತ್ಯಾಸ?*
ಹಾಳೆಗಳನ್ನು ಜೋಡಿಸಿದರೆ ಫೈಲ್; ನಾಳೆಗಳನ್ನು ಜೋಡಿಸಿದರೆ ಲೈಫ್.

ರಾಜೀವ ಮಾಗಲ್, ಸಕಲೇಶಪುರ
*'ನಾಲಿಗೆಗೆ ಎಲುಬಿಲ್ಲ, ಅಂಗಾಲಿಗೆ ಹೇಸಿಗೆ ಇಲ್ಲ' ಅನ್ನೋದು ಹಳೇ ಗಾದೆ. ಈಗಿನದು?*
ಚ್ಯಾಟಿಂಗಿಗೆ ಮಿತಿ ಇಲ್ಲ, ಇಂಟರ್ನೆಟ್ಟಿಗೆ ಹೇಸಿಗೆ ಇಲ್ಲ.

■ ರಾಮ್